ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ 'ಬಿ+' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www.jsscwkgl.org

## ರಾಷ್ಟ್ರಕವಿ ಡಾ ಜಿ.ಎಸ್.ಶಿವರುದ್ರಪ್ಪನವರು ಬದುಕು–ಬರಹ

ಕೊಳ್ಳೇಗಾಲ – 22.8.2025 ರಂದು ಕೊಳ್ಳೇಗಾಲ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗು ಮಹಿಳಾ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ ಇವರುಗಳ ಸಹಯೋಗದೊಂದಿಗೆ " ರಾಷ್ಟ್ರಕವಿ ಜಿ.ಎಸ್ ಶಿವರುದ್ರಪ್ಪನವರ ಸಾಹಿತ್ಯೋತ್ಸವ" ಶೀರ್ಷಿಕೆ ಅಡಿಯಲ್ಲಿ ಜಿ.ಎಸ್ ಶಿವರುದ್ರಪ್ಪನವರ ಬದುಕು–ಬರಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತ್ತು.

ಕಾರ್ಯಕ್ರಮ ಉದ್ಘಾಟನೆ ನೇರೆವೆರಿಸಿದ ಶ್ರೀ ದಿನೇಶ್‌ಕುಮಾರ್, ಮೀನಾ ಭಾರತೀಯ ಆಡಳತಾ ಸೇವೆ, ಉಪವಿಭಾಗ ಅಧಿಕಾರಿಗಳು, ಕೊಳ್ಳೇಗಾಲ ಇವರು ಉದ್ಘಾಟನಾ ಭಾಷಣ ಮಾಡಿ " ಯಶಸ್ಸು ಒಂದು ದಿನದ ಪಲವಲ್ಲ, ಶತತ ಪರಿಶ್ರಮದಿಂದ ಮಾತ್ರ ಸಾಧ್ಯ. ವಯಸ್ಸಿಗೆ ತಕ್ಕ ಹಾಗೆ, ಸಮಯಕ್ಕೆ ತಕ್ಕ ಹಾಗೆ, ಗುರಿ & ಸ್ಪೂರ್ತಿ ನಮ್ಮಲ್ಲಿ ಇರಬೇಕು" ಎಂದು ಹೇಳದರು.

ಕಾರ್ಯಕ್ರಮದಲ್ಲಿ ಪ್ರಾಸ್ತವಿಕ ನುಡಿಯನ್ನು ಆಡಿದ್ದ ಪ್ರಾಚಾರ್ಯರಾದ ಡಾ ಹೆಚ್.ಎಸ್.ಕೊಂಗಳಪ್ಪ ಇವರು " ಶಿವರುದ್ರಪ್ಪನವರು, 1926 ಫೆಬ್ರವರಿ 7 ರಂದು ಶಿವಮೊಗ್ಗದ ಶಿಕಾರಿಪುರ ತಾಲ್ಲೂಕು, ಈಸೂರು ಗ್ರಾಮದಲ್ಲಿ ಜನಿಸಿದರು. ಚೆಲುವು–ಒಲವು, ದೇವ ಶಿಲ್ಪ, ದೀಪದ ಹೆಜ್ಜೆ ಮುಂತಾದವುಗಳು ಇವರು ರಚಿಸಿದ ಕೃತಿಗಳು. ಇವರ ಗೀತೆಗಳು ನಮ್ಮ ಬಾಲ್ಯವನ್ನು ಮರುಕಳಸುತ್ತದೆ ಹಾಗಾಗಿ ಅಂದು–ಇಂದು ಎಂದೆಂದಿಗೂ ಕನ್ನಡಿಗರ ಮನದಲ್ಲಿ ಚಿರಸ್ಥಾಯಿಯಾಗಿರುತ್ತಾರೆ" ಎಂದು ಹೇಳದರು.

ಕಾರ್ಯಕ್ರಮಕ್ಕೆ ವಿಶೇಷ ಉಪನ್ಯಾಸ ನೀಡಲು ಆಗಮಿಸಿದ್ದ ಶ್ರೀ ಶಿವಣ್ಣ, ಇಂದುವಾಡಿ, ಸಾಹಿತಿ ಹಾಗೂ ನಿವೃತ್ತ ಶಿಕ್ಷಕರು ಇವರು ಮಾತನಾಡಿ " ಜಿ.ಎಸ್.ಎಸ್ ಮತ್ತು ಜೆ.ಎಸ್.ಎಸ್ ನಡುವೆ ಅವಿನಾಭಾವ ಸಂಬಂಧವಿದೆ. ಜಿಎಸ್‌ಎಸ್ ಪರಿಚಯ ವಿದ್ಯಾರ್ಥಿಗಳಗೆ ಸೃಜನ ಶೀಲ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಮಾದರಿಯಾಗಿದೆ. ಇವರ ಕಾವ್ಯ ಒಂದು ಧ್ಯಾನಿಕ ಕಾವ್ಯ ಅವರು ರಚಿಸಿದ ಹಾಡಿನ ಭಾವನೆ ಅರಿತರೆ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಸತ್ಯವೆಂಬುದು ಕಡಲು ಇದ್ದ ಹಾಗೆ ಅದು ಕಾಣುವುದಿಲ್ಲ. ಒಟ್ಟಾರೆ ಜಿಎಸ್‌ಎಸ್ ರವರು ಸಾಹಿತ್ಯ ಲೋಕದಲ್ಲಿ ಸೂರ್ಯ–ಚಂದ್ರ ಇರುವವರೆಗೂ ಅಚ್ಚಳಯದೆ ಉಳವುವರು" ಎಂದು ತಿಳಸಿದರು.

ಶ್ರೀ ನಾಗರಾಜು ಕೊಂಗರಹಳ್ಳಿ ರವರು ಅಧ್ಯಕ್ಷೀಯ ಭಾಷಣ ಮಾಡಿ ಶಿವರುದ್ರಪ್ಪನವರು ಮಹಾಚೇತನ ದ್ಯಾನೀಕ ಕಾವ್ಯ ಕನ್ನಡಕ್ಕೆ ದೊರೆತ ಅಮೂಲ್ಯ ವ್ಯಕ್ತಿತ್ವ, ಶುದ್ಧತೆ, ಭದ್ಧತೆ ಮತ್ತು ಪ್ರಾಮಾಣೀಕತೆಯಿಂದ ಜೀವಿಸಿ ಸ್ವಂತಿಕೆಯಿಂದ ಬದುಕಿದವರು ಜಿಎಸ್‌ಎಸ್ ಎಂದು ತಿಳಸಿದರು.

ಶ್ರೀ ದಿನೇಶ್‌ಕುಮಾರ್, ಮೀನಾ ಭಾರತೀಯ ಆಡಳಿತಾ ಸೇವೆ, ಉಪವಿಭಾಗ ಅಧಿಕಾರಿಗಳು, ಕೊಳ್ಳೇಗಾಲ ಇವರು ಉದ್ಘಾಟನಾ ಮಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಶಿವಣ್ಣ, ಇಂದುವಾಡಿ, ಸಾಹಿತಿ ಹಾಗೂ ನಿವೃತ್ತ ಶಿಕ್ಷಕರು, ಶ್ರೀ ನಾಗರಾಜು ಕೊಂಗರಹಳ್ಳಿ ರವರು, ಪ್ರಾರ್ಚಾಯರಾದ ಡಾ ಹೆಚ್.ಎಸ್.ಕೊಂಗಳಪ್ಪರವರು



ಶ್ರೀ ದಿನೇಶ್‌ಕುಮಾರ್, ಮೀನಾ ಭಾರತೀಯ ಆಡಳಿತಾ ಸೇವೆ, ಉಪವಿಭಾಗ ಅಧಿಕಾರಿಗಳು, ಕೊಳ್ಳೇಗಾಲ ಇವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಶಿವಣ್ಣ, ಇಂದುವಾಡಿ, ಸಾಹಿತಿ ಹಾಗೂ ನಿವೃತ್ತ ಶಿಕ್ಷಕರು, ಶ್ರೀ ನಾಗರಾಜು ಕೊಂಗರಹಳ್ಳಿ ರವರು, ಪ್ರಾರ್ಚಾಯರಾದ ಡಾ ಹೆಚ್.ಎಸ್.ಕೊಂಗಳಪ್ಪರವರು

